ಅವು ಕಚ್ಚಿಬಿಡುತ್ತವೆ.

ನಾರ್ಥ್ ಡಕೋಟದ ವ್ಯೋಮಿಂಗ್ ಭಾಗದಲ್ಲಿ ಥಿಯೋಡರ್ ರೂಸ್‌ವೆಲ್ಟ್ ನ್ಯಾಷನಲ್ ಪಾರ್ಕ್‌ನಲ್ಲಿ ಇರುವ ಕಾಡು ಕುದುರೆಗಳೆಲ್ಲ ಹಿಂದೆ ಸ್ಪ್ಯಾನಿಷರು, ವಿಶೇಷವಾಗಿ ದಕ್ಷಿಣ ಮತ್ತು ಉತ್ತರ ಅಮೆರಿಕದ ಬುಡಕಟ್ಟುಗಳು ತಂದುಬಿಟ್ಟವು. ಒಂದು ಕಾಲಕ್ಕೆ ಪಳಗಿದ್ದವು, ಅನಂತರ ಕಾಡು ಪಾಲಾಗಿ ಕಾಡಲ್ಲೇ ಉಳಿದವು. ಇಂಥ ಹಲವು ಸಂರಕ್ಷಿತ ವನ್ಯಧಾಮಗಳು ಕಾಡು ಕುದುರೆಗಳಿಗೆ ನೈಸರ್ಗಿಕ ಆವಾಸ ತಾಣಗಳನ್ನು ನೀಡಿವೆ. ಕೆನಡದ ಆಲ್ಬರ್ಟ್, ಯೂರೋಪಿನಲ್ಲಿ ಪೋರ್ಚುಗಲ್, ಪೋಲೆಂಡ್, ನೀದರ್‌ಲೆಂಡ್, ಯು.ಕೆ, ಇತ್ತ ಚೈನಾ, ರಷ್ಯಾ, ಜಪಾನ್‌ಗಳು ತಮ್ಮ ಯಥಾಶಕ್ತಿ ಕಾಡು ಕುದುರೆಗಳನ್ನು ಉಳಿಸಿಕೊಳ್ಳಲು ಹೋರಾಡುತ್ತಿವೆ.

ಭಾರತದಲ್ಲೂ ಅಸ್ಸಾಂ ದಿಬ್ರೂ ಪಾರ್ಕ್‌ನಲ್ಲಿ ಸೀಮಿತ ಪ್ರಮಾಣದ ಕಾಡು ಕುದುರೆಗಳಿವೆ. ಈ ಪೈಕಿ ನಮೀಬಿಯದ ಕಾಡು ಕುದುರೆಗಳಿಗೆ ವಿಶಿಷ್ಟ ಹಿನ್ನೆಲೆ ಇದೆ. ಅವನ್ನು ದಷ್ಟಪುಷ್ಟವಾಗಿ ಸಾಕಿರುವುದು ಎದ್ದುಕಾಣುತ್ತದೆ. ನಮೀಬಿಯದಲ್ಲಿ ಸಾಕಿದ ಕುದುರೆಗಳನ್ನು ಹಡಗಿನಲ್ಲಿ ಆಸ್ಟ್ರೇಲಿಯಕ್ಕೆ ಸಾಗಿಸುವಾಗ ತೀರಕ್ಕೆ ಸಮೀಪವೇ ಹಡಗು ಒಡೆದಾಗ, ತಾಕತ್ತಿದ್ದ ಕುದುರೆಗಳು ನೀರಿನಲ್ಲಿ ಈಜಿ ಬಚಾವಾಗಿ ಕಾಡು ಸೇರಿದವು. ಮತ್ತೆ ಅವನ್ನು ಹಿಡಿಯುವ ಪ್ರಯತ್ನ ಮಾಡಲಿಲ್ಲ. ಆದರೆ ಅಲ್ಲಿನ ಪದೇ ಪದೇ ಬರಗಾಲ, ಎಳೆ ಪ್ರಾಯದವನ್ನೂ, ಮುದಿಯಾದವನ್ನು ಕೊಲ್ಲುತ್ತದೆ. ಹೀಗಾಗಿ ಅವುಗಳದ್ದು ಹೋರಾಟದ ಬದುಕು. ಅಲ್ಲದೆ ಕಿರುಬಗಳ ಕಾಟ ಬೇರೆ. ಕಾಡು ಕುದುರೆಗಳು ಓಡಾಡುವ ಭಾಗದಲ್ಲಿ ಬೇಟೆ ಪ್ರಾಣಿಗಳು ನುಗ್ಗದಿರಲೆಂದು ಅಲ್ಲಿ ತಂತಿ ಬೇಲಿಯನ್ನು ನಿರ್ಮಿಸಲಾಗಿದೆ.

## ಆಸ್ಟ್ರೇಲಿಯಾ ಎಂಬ ಸ್ವರ್ಗನರಕ

ಆಸ್ಟ್ರೇಲಿಯಾ ಕಾಡು ಕುದುರೆಗಳ ವಿಚಾರದಲ್ಲಿ ಜಗತ್ತಿಗೆ ತಾನೇ ಸಾರ್ವಭೌಮ ಎಂದು ಹೇಳಿಕೊಳ್ಳುತ್ತಿರುವುದರಲ್ಲಿ ಅರ್ಥವಿದೆ. ಆಸ್ಟ್ರೇಲಿಯದ ಆಲ್ಫ್ಸ್ ಸಾಲಿನಲ್ಲಿ, ಉತ್ತರ ಭಾಗದಲ್ಲಿ ಕ್ವೀನ್ಸ್‌ಲ್ಯಾಂಡಿನ ಹಿತ ವಾತಾವರಣದಲ್ಲಿ ಸ್ವೈರ ಬದುಕು ನಡೆಸಿರುವ ಕಾಡು ಕುದುರೆಗಳ ಸಂಖ್ಯೆ ನಾಲ್ಕು ಲಕ್ಷ ದಾಟಿದೆ. ಆಸ್ಟ್ರೇಲಿಯಾಕ್ಕೆ ತನ್ನ ದೇಶದ್ದೇ ಎಂದು ಹೇಳಿಕೊಳ್ಳುವ ಕುದುರೆಗಳೇ ಇರಲಿಲ್ಲ. ಯೂರೋಪಿನ ಬೇರೆ ಬೇರೆ ಭಾಗಗಳಿಂದ ವಲಸೆ ಬಂದವರು ಕುದುರೆಗಳನ್ನೂ ತಂದರು. 1792ರಲ್ಲಿ ಜೇಮ್ಸ್ ಬ್ರಂಬಿ ಎಂಬ ಇಂಗ್ಲೆಂಡಿನ ಸೈನಿಕ ತನ್ನೊಡನೆ ದೊಡ್ಡ ಪ್ರಮಾಣದಲ್ಲಿ ಆಸ್ಟ್ರೇಲಿಯಾಕ್ಕೆ ಕುದುರೆಗಳನ್ನು ತಂದ. ಮುಂದೆ ಅದರ ಪಾಲನೆ ಪೋಷಣೆಯಲ್ಲಿ ಎಷ್ಟು ಕಾಳಜಿ ವಹಿಸಿದನೆಂದರೆ, ಆ ಕುದುರೆಗಳಿಗೆ ಬ್ರಂಬಿ ಎಂಬ ಹೆಸರೇ ನಿಂತಿತು. ನೂರು ಹೆಕ್ಟೇರ್ ಪ್ರದೇಶದಲ್ಲಿ ಎಲ್ಲೆಲ್ಲೂ ಕುದುರೆಗಳೇ. ಕೊನೆಗೆ ಅವನಿಗೆ ನಿಭಾಯಿಸಲಾಗದೆ ಹಾಗೆಯೇ ಅವುಗಳನ್ನು ಬಿಟ್ಟು ಎಲ್ಲಿಗೋ ವಲಸೆಹೋದ. ಆ ಕುದುರೆಗಳು ಕಾಡು ಸೇರಿದವು. ಅನಂತರ ಬೇರೆ ಬೇರೆ ಭಾಗಗಳಿಂದ ವಿಶೇಷವಾಗಿ ಐರ್ಲೆಂಡ್, ಬ್ರಿಟನ್ನಿನಿಂದ ಶುದ್ಧ ತಳಿಗಳು ಬಂದವು, ಮಿಶ್ರ ತಳಿಗಳೂ ಬಂದವು. ಅವುಗಳದ್ದು ಅದೇ ಸ್ಥಿತಿ, ಕಾಡು ಪಾಲಾದವು. ಕೊನೆಗೆ ಸಾರ್ವಜನಿಕರು ಅವುಗಳನ್ನು ಹಿಡಿದು,



